ಕೆಲಸ ಪ್ರಾರಂಭ ಮಾಡಿಲ್ಲ. ನಾನು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ಕರೆಸಿದಾಗ ಈ ವರ್ಷ ಸ್ಟಾರ್ಟ್ ಮಾಡುತ್ತೇವೆ, ಇನ್ನು ಆರು ತಿಂಗಳಲ್ಲಿ ಸ್ಟಾರ್ಟ್ ಮಾಡುತ್ತೇವೆಂದು ಕಳೆದ ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಆ ಕಾರಣ ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಕಾರ್ಯವನ್ನು ನಾವು ಸಣ್ಣ ನೀರಾವರಿಯಲ್ಲಿ ಫಿಸಿಬಿಲಿಟಿ ಬಂದರೆ ಖಂಡಿತ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಶಿರಗೊಪ್ಪ ತಾಲ್ಲೂಕಿನಲ್ಲಿ ಬಹಳಷ್ಟು ತುಂಗಭದ್ರಾ ನದಿಯ ಉಪ ಕಾಲುವೆಗಳು ವೇಸ್ಟಾಗಿ ಕರ್ನಾಟಕದಿಂದ ಬಹಳಷ್ಟು ನೀರು ಆಂಧ್ರಾಕ್ಕೆ ಹೋಗುತ್ತಿದೆ. ಅದನ್ನು ತಡೆಗಟ್ಟಬೇಕು. ನಮ್ಮ ರೈತರಿಗೆ ಒಳ್ಳೆಯದಾಗಬೇಕು ಅಂದರೆ ಬಹಳಷ್ಟು ಸಣ್ಣ ನೀರಾವರಿ ಮಾಡಬೇಕು. ಆ ದೃಷ್ಟಿಯಿಂದ ತಮಗೆ ಕೂಡ ಒಂದು ಲೆಟರ್ ಬರೆದಿದ್ದೇನೆ. ಬಳ್ಳಾರಿ ಡಿವಿಜನ್ ಮಾಡಬೇಕು. ಈಗ ಕರ್ಸ್‌ಪಾಂಡೆನ್ಸ್ ಬಹಳ ಲೇಟಾಗಿ ಧಾರವಾಡಕ್ಕೆ, ಬಿಜಾಪುರಕ್ಕೆ ಹೋಗಿ ಬಹಳಷ್ಟು ರೈತರಿಗೆ ಅನ್ಯಾಯವಾಗುತ್ತದೆ ಎಂದು ತಿಳಿಸಿ ಕಾಗದ ಬರೆದಿದ್ದೇನೆ. ಇಂಥ ನೀರಾವರಿ ಸ್ಕೀಮ್‌ಗಳು ಕೋಲಾರದಂತಹ ಕಡೆ ಮಾಡಲು ಆಗುವುದಿಲ್ಲ. ಆದರೆ ಬಳ್ಳಾರಿಯಲ್ಲಿ ಬಹಳಷ್ಟು ನೀರು ಇರುವುದಕ್ಕೋಸ್ಕರ ಅದನ್ನು ಉಪಯೋಗಿಸಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಒಂದು ಡಿವಿಷನಲ್ ಆಫೀಸನ್ನು ಮಾಡಿ ಕಾರ್ಯಕ್ರಮವನ್ನು ಅದಷ್ಟು ಬೇಗ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಮಾನ್ಯ ಅಧ್ಯಕ್ಷರೇ, ಬಹುತೇಕ ಸದಸ್ಯರಿಗೆ ಗೊತ್ತಿರಬಹುದು, ಇದನ್ನು ನಮ್ಮ ಬಿಜಾಪುರ ಕಾರ್ಪೋರೇಷನ್ ಅಡಿಯಲ್ಲಿ ಕೈಗೊಳ್ಳುವುದಕ್ಕೆ ಆಗುವುದಿಲ್ಲ, ಏಕೆಂದರೆ ನಬಾರ್ಡ್‌ನಿಂದ ಹಣಕಾಸಿನ ಸಹಾಯ ಬರುವುದಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಲಿಫ್ಟ್ ಮಾಡುವಂತಹದ್ದು ಏನಾದರೂ ಇದ್ದರೆ ಅದನ್ನು ನಾನು ಖಂಡಿತ ಯೋಚನೆ ಮಾಡುತ್ತೇನೆ.

ತುಂಗಾ ಮೇಲ್ದಂಡೆ ಯೋಜನೆ

2358 - ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ರಾಜ್ಯದ ತಾಂತ್ರಿಕ ಸಮಿತಿಯು ಒಪ್ಪಿಗೆ ನೀಡಿದೆಯೇ?

ಆ) ಯೋಜನೆ ತಗಲುವ ವೆಚ್ಚ ಎಷ್ಟು?

ಇ) ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಬೇಕಾಗುವ ಸಮಯ

ಈ) ಈ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ರಾಣೆಬೆನ್ನೂರಿನಲ್ಲಿ ಇಂಜಿನಿಯರಿಂಗ್ ವೃತ್ತದ ಕಛೇರಿಯನ್ನು ತೆರೆಯಲು ಸರ್ಕಾರದ ಉದ್ದೇಶವಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ನೀಡಿದೆ.

ಆ) 271.41 ಕೋಟಿ ರೂಪಾಯಿಗಳು (1988-89ರ ಸಾಲಿನ ಪ್ರಕಾರ).

ಇ) ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಈ) ಯೋಜನೆಯನ್ನು ಪ್ರಾರಂಭಿಸುವ ಸಮಯದಲ್ಲಿ ಈ ನಿಬಂಧನೆಯನ್ನು ಪರಿಶೀಲಿಸಲಾಗುವುದು.

ಶ್ರೀ ಕೆ.ಬಿ. ಕೋಳಿವಾಡ್ : ಸನ್ಮಾನ್ಯ ಅಧ್ಯಕ್ಷರೆ, ಅಪ್ಪರ್ ತುಂಗಾ ಯೋಜನೆಯನ್ನು ಎಂದು ಕೈಗೊತ್ತಿಗೊಳ್ಳಲಾಗುವುದು ಎಂದು ನಾನು ಕೇಳಿದ್ದೇನೆ, ಅದಕ್ಕೆ ಮಾನ್ಯ ಮಂತ್ರಿಗಳು ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈಗ ಪ್ರಾರಂಭವಾಗಿರುವಂತಹ ಯೋಜನೆಗಳೆಲ್ಲಾ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಪ್ರಾರಂಭವಾಗಿದೆಯೇ ಹೇಗೆ? ಎರಡನೆಯದಾಗಿ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಅಪ್ಪರ್ ತುಂಗಾ ಯೋಜನೆಗೆ ಐದು ಕೋಟಿ ರೂಪಾಯಿಗಳನ್ನು ಮಾರ್ಚ್ ಒಳಗೆ ಖರ್ಚು ಮಾಡಲಿಕ್ಕೆ ಒದಗಿಸಿದ್ದೇವೆ ಎಂಬ ಒಂದು ವಿಶೇಷವಾದಂತಹ ಪ್ರಕಟಣೆ ಮಾಡಿದ್ದಾರೆ. ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳದೇ ಹೋದರೆ ಆ ಹಣವನ್ನು ಯಾವ ರೀತಿ ಖರ್ಚು ಮಾಡುತ್ತೀರಿ? ನನ್ನ ಈ ಎರಡು ಪ್ರಶ್ನೆಗಳಿಗೆ ತಾವು ಸ್ಪಷ್ಟವಾಗಿ ಉತ್ತರ ಹೇಳಬೇಕು. ಕೂಡಲೇ ಈ ಕಾರ್ಯವನ್ನು ಕೈಗೆತ್ತಿಕೊಂಡು ರಾಣೆಬೆನ್ನೂರಿನಲ್ಲಿ ಒಂದು ಇಂಜಿನಿಯರಿಂಗ್ ಸರ್ಕಲ್ ಪ್ರಾರಂಭ ಮಾಡಿ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಳ್ಳುತ್ತದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಆ ಯೋಜನೆ ಬಗ್ಗೆ ವಿಶೇಷವಾದಂಥ ಹಣಕಾಸಿನ ವ್ಯವಸ್ಥೆ ಬಗ್ಗೆ ವಿವರಣೆ ನೀಡಿದ್ದಾರೆ. ಮಾನ್ಯ ಕೋಳಿವಾಡರ ಹಾಗೂ ಇನ್ನು ಉಳಿದ ಆ ಭಾಗದ ಶಾಸಕರದು ಏನು ಒಂದು ಇಚ್ಛೆ ಇತ್ತು, ಆ ಇಚ್ಛೆ ಪ್ರಕಾರ ಆ ಒಂದು ಕೆಲಸವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ವರದಿಯನ್ನು ಕೇಂದ್ರಸರ್ಕಾರದ ಮನ್ನಣೆಗೆ ಮಾರ್ಚ್ 1991ರಂದು ನಾವು ಸಲ್ಲಿಸಿದ್ದೇವೆ. ಆದರೆ ಕೆಲವೊಂದು ತಾಂತ್ರಿಕ ತೊಂದರೆ ಇರುವುದರಿಂದ ಅದು ವಾಪಸ್ಸು ಬಂದಿದೆ. ಅದನ್ನು ಆದಷ್ಟು ಶೀಘ್ರವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಶೀಘ್ರಗತಿಯಿಂದ ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್ : ಈ ಯೋಜನೆಯನ್ನು ಕೇಂದ್ರ ಸರ್ಕಾರದ ಮನ್ನಣೆ ಪಡೆದ ನಂತರ ಪ್ರಾರಂಭ ಮಾಡುತ್ತೀರೋ ಅಥವಾ ತಕ್ಷಣವೇ ಪ್ರಾರಂಭ ಮಾಡುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ ಆದಷ್ಟು ಶೀಘ್ರವಾಗಿ ಕಾರ್ಯ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಐದು ಕೋಟಿ ರೂಪಾಯಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ ಯೋಜನೆಗೆ ಮಾತ್ರ ಕೇಂದ್ರ ಸರ್ಕಾರದ ಅನುಮತಿ ಬೇಕು ಎಂದು ಹೇಳುತ್ತಿದ್ದೀರಿ, ರಾಜ್ಯದ ಸುಮಾರು 15 ಯೋಜನೆಗಳನ್ನು ಕೇಂದ್ರಸರ್ಕಾರದ ಅನುಮತಿ ಇಲ್ಲದೇ ಪ್ರಾರಂಭ ಮಾಡಿದ್ದೀರಿ, ಇದನ್ನು ಏಕೆ ಮಾಡಬಾರದು?